# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/2818/2021/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 24.01.2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿರವರಿಂದ ಉಡುಪಿ ತಾಲ್ಲೂಕು ಕೊಡಿಕನ್ಯಾನಜೆಟ್ಟಿ ಮುಂಭಾಗದಲ್ಲಿ ಹಾಗು ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿಗಳ ಕುರಿತು ಟೆಂಡರ್‌ನ್ನು ಕರೆದಿದ್ದು, ಅದರನ್ವಯ ಕಾರ್ಯಾದೇಶವನ್ನು ಕಾಮಗಾರಿಗೆ ನೀಡಿದ್ದು, ಕಾರ್ಯಾದೇಶವನ್ನು ನೀಡುವ ಪೂರ್ವದಲ್ಲಿ ಸಿ.ಆರ್.ಜಡ್‌ನ ಅನುಮತಿ ಪಡೆಯದೇ ಕಾಮಗಾರಿಗಳನ್ನು ಕಾರ್ಯಗತ ಗೊಳಿಸಿದ್ದರಿಂದ, ರಾಷ್ಟ್ರೀಯ ಹಸಿರು ನ್ಯಾಯಪೀಠ ದಕ್ಷಿಣ ವಲಯ, ಚನ್ನೈದಿಂದ ಸರ್ಕಾರಕ್ಕೆ 2 ಕೋಟಿ 65 ಸಾವಿರ ಒಂದು ನೂರು 65 ರೂಪಾಯಿ ದಂಡ ವಿಧಿಸಲು ಎದುರುದಾರರು ಕಾರಣರಾಗಿದ್ದು, ಸರ್ಕಾರಕ್ಕೆ ಉಂಟಾದ ನಷ್ಟವನ್ನು ಮರುಭರಣಾ ಮಾಡಿಕೊಳ್ಳುವ ಕುರಿತು ಶಿಫಾರಸ್ಸು ವರದಿ

*****

1) ಶ್ರೀ. ಸಿ.ಎನ್. ಶ್ರೀನಿವಾಸ ರಾವ್, ವಿಜಯ ಸಾರಥಿ ಲಾ ಫೋರಂ, ನಂ.501, 1ನೇ ಅಡ್ಡ ರಸ್ತೆ, ಲಿಂಕ್ ರೋಡ್, ಮಲ್ಲೇಶ್ವರಂ, ಬೆಂಗಳೂರು ಜಿಲ್ಲೆ ಇವರು (ಇನ್ನು ಮುಂದೆ ದೂರುದಾರರೆಂದು ಕರೆಯಲ್ಪಡುತ್ತಾರೆ) 1) ಕಾರ್ಯನಿರ್ವಾಹಕ ಅಭಿಯಂತರರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, 2ನೇ ಮಹಡಿ, ಶಮಿಲ ಕಟ್ಟಡ, ಉಡುಪಿ ಜಿಲ್ಲೆ 2) ಶ್ರೀ ದಯಾನಂದ ಕೆ.ಆರ್., ಹಿಂದಿನ ಕಾರ್ಯನಿರ್ವಾಹಕ

ಅಭಿಯಂತರರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಪವಿಭಾಗ ಉಡುಪಿ, ಉಡುಪಿ ಜಿಲ್ಲೆ 3) ಶ್ರೀ ಉದಯಕುಮಾರ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಪವಿಭಾಗ ಉಡುಪಿ, ಉಡುಪಿ ಜಿಲ್ಲೆ 4) ಶ್ರೀ ಟಿ.ಎಂ.ಮಂಜೇಗೌಡ, ಕಾರ್ಯನಿರ್ವಾಹಕ ಅಭಿಯಂತರರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಪವಿಭಾಗ ಉಡುಪಿ, ಉಡುಪಿ ಜಿಲ್ಲೆ ( 2 ರಿಂದ 4 ರವರನ್ನು ವಿಚಾರಣೆ ಕಾಲಕ್ಕೆ ಸೇರ್ಪಡೆಗೊಳಸಲಾಗಿದೆ) (ಇನ್ನು ಮುಂದೆ 1 ರಿಂದ 4ನೇ ಎದುರುದಾರರೆಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ ದೂರು ಸಲ್ಲಿಸಿರುತ್ತಾರೆ.

2) <u>ದೂರಿನ ಸಾರಾಂಶ</u>:-

ದೂರುದಾರರು ತಮ್ಮ ದೂರಿನಲ್ಲಿ ಬಂದರು ಮತ್ತು ಮೀನುಗಾರಿಕೆ ಇಲಾಖೆ ಉಡುಪಿ ರವರಿಂದ ಅನೇಕ ಕಾಮಗಾರಿಗಳ ಕುರಿತು ಟೆಂಡರ್‌ನ್ನು ಕರೆದಿದ್ದು, ಅದರನ್ವಯ ಕಾರ್ಯಾದೇಶವನ್ನು ಕಾಮಗಾರಿಗಳಗೆ ನೀಡಲಾಗಿರುತ್ತದೆ. ಆದರೆ ಕಾರ್ಯಾದೇಶವನ್ನು ನೀಡುವ ಪೂರ್ವದಲ್ಲಿ ಸಿ.ಆರ್.ಜೆಡ್ ನ ಅನುಮತಿಯನ್ನು ಪಡೆಯದೇ ಕಾಮಗಾರಿಗಳನ್ನು ಕಾರ್ಯಗತಗೊಳಸುತ್ತಿದ್ದು, ಈ ಕೆಳಕಂಡ ಕಾಮಗಾರಿಗಳಗೆ ಸಿ.ಆರ್.ಜೆಡ್ ನ ಅನುಮತಿಯನ್ನು ಪಡೆದಿರುವುದಿಲ್ಲ.

1. construction of costal berth at old port Mangaluru.
2. Development of Hajamadi-Kodi Fishery harbor in Kapu Taluk Udupi District.

3. Construction of Fish Jetty for berthing of boats at Padukeri side in Udyavara River Udupi Taluk.
4. Re-construction of Jetty at Gangoli Fishing harbor in Udupi District.
5. Construction of sea erosion protection work at Hajamadi, Padubidre, Mulluru and Kaipunjal seashores in Kaapu Taluk in Udupi District.
6. Construction of sea erosion protection wall at Someshwara meenakaliya, Hosabettu-Chitrapura and Sasihithlu of Dakshina Kannada District.

ಸದರಿ ಕಾಮಗಾರಿಗಳಲ್ಲಿ ಈಗಾಗಲೇ ಡ್ರ್ಯಾಡ್ಜಿಂಗ್ ವರ್ಕ್ ಇನ್ಸ್ಟಂಟ್ ಆಫ್ ಕೋಡಿ ಕನ್ಯಾನ ಜಟ್ಟಿ ಕಾಮಗಾರಿ ಸಂಬಂಧ ಮಂಗಳೂರಿನ ಕಂಪನಿಗೆ ಕಾಮಗಾರಿ ಆದೇಶ ನೀಡಿದ್ದು, ಸದರಿ ಕಾಮಗಾರಿಗೆ ಸಿ.ಆರ್.ಜೆಡ್ ನ ಅನುಮತಿ ಪಡೆಯದೇ ಕಾಮಗಾರಿ ಪ್ರಾರಂಭಿಸಿದ್ದರಿಂದ ಸ್ಥಳೀಯರು ಎನ್.ಜಿ.ಟಿ. ಯ (ನ್ಯಾಷನಲ್ ಗ್ರೀನ್ ಟ್ರಿಬ್ಯುನಲ್) ಮುಂದೆ ಅರ್ಜಿ ಸಲ್ಲಿಸಿದ್ದರಿಂದ ಎನ್.ಜಿ.ಟಿ ಯು ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸಿ ಸುಮಾರು 2 ಕೋಟಿ ರೂಗಳ ದಂಡವನ್ನು ವಿಧಿಸಿದ್ದು, ಸದರಿ ದಂಡದ

ಹಣವನ್ನು ಸರ್ಕಾರವು ಪಾವತಿ ಮಾಡಬೇಕಾಗಿದ್ದು, ಸದರಿ ಹಣವು ಸಾರ್ವಜನಿಕರ ಹಣವಾಗಿದ್ದು, ಇಲಾಖೆಯ ನಿರ್ಲಕ್ಷ್ಯತನದಿಂದ ದಂಡದ ಹಣವನ್ನು ಪಾವತಿ ಮಾಡಲಾಗಿರುತ್ತದೆ. ಇದರಿಂದ ಮೀನುಗಾರರು ಅನಾವಶ್ಯಕವಾಗಿ ಸದರಿ ಹಣದ ಭಾರವನ್ನು ಹೊರಬೇಕಾಗಿರುತ್ತದೆ. ಎಂಬಂತೆ ನಮೂದಿಸಿ ಎದುರುದಾರರು ಸಿ.ಆರ್.ಜೆಡ್ ಅನುಮತಿ ಪಡೆಯದೇ ಸದರಿ ಕಾಮಗಾರಿಗಳಿಗೆ ಆದೇಶ ನೀಡಿರುವುದು ಎದುರುದಾರರ ಅಧಿಕಾರ ದುರುಪಯೋಗವಾಗಿರುತ್ತದೆ ಎಂದು ನಮೂದಿಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ದೂರು ಸಲ್ಲಿಸಿರುತ್ತಾರೆ.

3) **1ನೇ ಎದುರುದಾರರು ದಿ: 24/11/2021 ರಂದು ಆಕ್ಷೇಪಣೆಯನ್ನು ಸಲ್ಲಿಸಿದ್ದು,** ದೂರುದಾರರು ಅಪಾದಿಸಿರುವ 6 ಕಾಮಗಾರಿಗಳಿಗೆ ದಿ: 30/11/2019 ರಂದು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಸಮಿತಿಯ ಮೂಲಕ ನಿರಕ್ಷೇಪಣಾ ಪತ್ರವನ್ನು ಪಡೆದು ನಿಯಮಾನುಸಾರ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

4) ಕಾಮಗಾರಿ ಅಡಿಯಲ್ಲಿ 6 ವಿವಿಧ ಕಾಮಗಾರಿಗಳನ್ನು ಸೇರಿಸಿ ಒಂದು ಪ್ಯಾಕೇಜ್ ಮಾಡಿ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಯನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಕಾಮಗಾರಿಗೆ ಸಿ.ಆರ್.ಝಡ್ ಕ್ಲಿಯರೆನ್ಸ್ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈಗಾಗಲೇ ಎನ್.ಐ.ಟಿ.ಕೆ ಸೂರತ್ಕಲ್ ಇವರು ಸ್ಥಳ ಪರೀಕ್ಷಿಸಿದ್ದು, ರ್‍ಯಾಪಿಡ್ ಇ.ಐ.ಎ ವರದಿ ನೀಡಬೇಕಾಗಿರುತ್ತದೆ.

5) ಸಮುದ್ರ ಕೊರೆತ ತಡೆಗಟ್ಟುವ ಸಂಬಂಧ 7 ವಿವಿಧ ಸರಪಳಿಗಳಲ್ಲಿನ ಕಾಮಗಾರಿಗಳನ್ನು ಸೇರಿಸಿ ಒಂದು ಪ್ಯಾಕೇಜ್ ಮಾಡಿ ಟೆಂಡರ್ ಕರೆದು

ಕಾಮಗಾರಿಯನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ, ದಕ್ಷಿಣ ಕನ್ನಡ ಜಿಲ್ಲೆಯ ಮೇಲಿನ ಪ್ರದೇಶಗಳಲ್ಲಿ ಸಂಭಾವ್ಯ ಸಮುದ್ರ ಕೊರೆತ ದ್ವಿತೀಯ ತೀರಗಳನ್ನು ಆಯ್ಕೆಮಾಡಿ ಸೂಕ್ತ ಸಮುದ್ರ ಕೊರೆತ ಸಂರಕ್ಷಣಾ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ಸಿ.ಡಬ್ಲ್ಯೂ.ಪಿ.ಆರ್.ಎಸ್, ಪೂಣೆ ಮತ್ತು ಕೆ.ಇ.ಆರ್.ಎಸ್ ಸಂಸ್ಥೆ, ಕೃಷ್ಣರಾಜಸಾಗರ ಇವರ ಮೂಲಕ ತಾಂತ್ರಿಕ ವಿನ್ಯಾಸವನ್ನು ಪಡೆದು ಸದರಿ ಪ್ರದೇಶದಲ್ಲಿ ಸಂರಕ್ಷಣಾ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಸಮುದ್ರ ಕೊರೆತ ನಿಯಂತ್ರಣಾ ಚಟುವಟಿಕೆಯು ಕರಾವಳಿ ನಿಯಂತ್ರಣಾ ವಲಯ ಅಧಿಸೂಚನೆ 2011 ರಪ್ರಕಾರ ಅನುಮತಿಸಿದ ಚಟುವಟಿಕೆಯಾಗಿದ್ದು, ಆಯ್ದ ಸಮುದ್ರ ಕೊರೆತ ಸಂಭಾವ್ಯ ಪ್ರದೇಶಗಳಲ್ಲಿ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ಕರಾವಳಿ ನಿಯಂತ್ರಣಾ ವಲಯ ನಿರಾಕ್ಷೇಪಣಾ ಪತ್ರ ಪಡೆಯಲು ಕಛೇರಿಯಿಂದ ದಿ:17/07/2021 ರಲ್ಲಿ ಅರ್ಜಿ ಸಲ್ಲಿಸಲಾಗಿದ್ದು, ದಿ:30/09/2021 ರಂದು ದಕ್ಷಿಣ ಕನ್ನಡ ಜಿಲ್ಲಾ ಕರಾವಳಿ ನಿಯಂತ್ರಣಾ ವಲಯ ನಿರ್ವಹಣಾ ಸಮಿತಿಯ ಮೂಲಕ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಸಮಿತಿಗೆ ಶಿಫಾರಸ್ಸು ಮಾಡಲಾಗಿರುತ್ತದೆ.

6) ದೂರುದಾರರು ತಮ್ಮ ದೂರಿನಲ್ಲಿ ಸಿ.ಆರ್.ಝಡ್ ಕ್ಲಿಯರೆನ್ಸ್ ಪಡೆಯದೇ ಮಂಗಳೂರು ಮೂಲದ ಗುತ್ತಿಗೆದಾರರಿಗೆ ಕಾಮಗಾರಿಯನ್ನು ನೀಡಿದ್ದು, ನಿರಾಕ್ಷೇಪಣಾ ಪತ್ರ ಪಡೆಯದೇ ಇದ್ದುದ್ದರಿಂದ ಎನ್.ಜಿ.ಟಿ ನ್ಯಾಯಪೀಠ 2 ಕೋಟಿ ದಂಡವಿಧಿಸಿದೆ ಎಂಬ ಅಂಶದ ಬಗ್ಗೆ ರಾಷ್ಟ್ರೀಯ ಹಸಿರು ನ್ಯಾಯ ಪೀಠ ದಕ್ಷಿಣ ವಲಯ ಚೆನ್ನೈ ಇವರಿಗೆ ಐರೋಡಿ ಗ್ರಾಮದ ಸ್ಥಳೀಯರು ಡ್ರೇಡ್ಜಿಂಗ್ ಕೈಗೊಂಡು ಹೂಳನ್ನು ನದಿದಂಡೆಯಲ್ಲಿ ಸಂಗ್ರಹಿಸಿರುವುದರಿಂದ ಪರಿಸರಕ್ಕೆ ಹಾನಿಯಾಗಿದೆ ಎಂದು ದೂರು ಸಲ್ಲಿಸಿದ್ದು, ಸಿ.ಆರ್.ಝಡ್ ನಿರಾಕ್ಷೇಪಣಾ ಪತ್ರ ಪಡೆಯಲು ಪರಿಸರ ಇಲಾಖೆಗೆ ದಿ: 09/01/2018 ಮತ್ತು 02/04/2019

ರಂದು ಅರ್ಜಿ ಸಲ್ಲಿಸಲಾಗಿದ್ದು, ಆದರೆ ಎನ್.ಜಿ.ಟಿ ನ್ಯಾಯಪೀಠದಲ್ಲಿ ದೂರು ದಾಖಲಾಗಿದ್ದರಿಂದ ನಿರಾಕ್ಷೇಪಣಾ ಪತ್ರ ದೊರೆತಿರುವುದಿಲ್ಲ.

7) ಎನ್.ಜಿ.ಟಿ ನ್ಯಾಯಪೀಠದಲ್ಲಿ ಪರಿಸರಕ್ಕೆ ಆದ ಹಾನಿ ಸರಿಪಡಿಸಲು ಹಾಗೂ ಡ್ರೇಡ್ಜಿಂಗ್ ಮಾಡಿ ನದಿ ದಂಡೆಯಲ್ಲಿ ಸಂಗ್ರಹಿಸಿರುವ ಹೂಳನ್ನು ಮತ್ತು ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಿರುವ ಬಂಡ್ ರಿವೆಟ್ಮೆಂಟ್ ತೆಗೆದು ಪರಿಸರವನ್ನು ಪೂರ್ವ ಸ್ಥಿತಿಗೆ ತರಲು ರೂ.2,00,65,165/- ಮೊತ್ತದ ದಂಡವನ್ನು ವಿಧಿಸಿರುತ್ತಾರೆ. ಈ ಕಾಮಗಾರಿಯ ಗುತ್ತಿಗೆದಾರರಾದ ಮೆ:ಯೋಜಕಾ ಇಂಡಿಯಾ ಪ್ರೈ.ಲಿ. ಮಂಗಳೂರು ಇವರು ಕಾಮಗಾರಿಯನ್ನು ಕೈಗೊಳ್ಳುವಾಗ ನಿಯಮಾವಳಿಯಂತೆ ಕೈಗೊಳ್ಳದೇ ಬೇಜವಾಬ್ದಾರಿಯಿಂದ ಹೂಳೆತ್ತಿದ ಮರಳನ್ನು ನದಿ ದಂಡೆಯಲ್ಲಿ ಡಂಪ್ ಮಾಡಿದ್ದರಿಂದ, ಹಲವಾರು ನೋಟಿಸ್‌ಗಳನ್ನು ಗುತ್ತಿಗೆದಾರರಿಗೆ ನೀಡಿದರೂ ಸಹಾ ಆಳ ಸಮುದ್ರದಲ್ಲಿ ಹೂಳೆತ್ತಿದ ಮರಳನ್ನು ಡಂಪ್ ಮಾಡದೇ ಇರುವುದರಿಂದ ಪರಿಸರಕ್ಕೆ ಹಾನಿಯಾಗಿರುವುದಾಗಿ ಸಿ.ಆರ್.ಝಡ್ ನಿಯಮ ಉಲ್ಲಂಘನೆಗಾಗಿ ದಂಡವಿಧಿಸಲಾಗಿರುತ್ತದೆ. ಸದರಿ ದಂಡವನ್ನು ನಿಯಮಾನುಸಾರ ಗುತ್ತಿಗೆದಾರರಿಂದ/ಇಲಾಖೆಯಿಂದ ಪಾವತಿಸಲು ಆದೇಶಿಸಲಾಗಿರುತ್ತದೆ.

8) ಮೆ:ಯೋಜಕಾ ಇಂಡಿಯಾ ಪ್ರೈ.ಲಿ ಮಂಗಳೂರು ಇವರು ಮಾನ್ಯ ಉಚ್ಛನ್ಯಾಯಾಲಯ, ಬೆಂಗಳೂರು ನಲ್ಲಿ ರಿಟ್ ಅರ್ಜಿ ಸಂಖ್ಯೆ:1430/2021, 1438/2021, 1362/2021, 7373/2021, 7374/2021, 7375/2021 ಮತ್ತು 7395/2021 ದಾವೆಗಳನ್ನು ದಾಖಲಿಸಿದ್ದು, ಮಾನ್ಯ ಉಚ್ಛನ್ಯಾಯಾಲಯವು ವಿಚಾರಣೆ ನಂತರ ದಾವೆದಾರರ ವಿರುದ್ಧ ತೀರ್ಪು ನೀಡಿದ್ದು ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿರುತ್ತದೆ.

- Bank Defulter

- Non Renewal of Bank Guarantees despite request
- Corrupt or Fraudulent practices
- Guilty of certain lapses in Kodikanyana Dredging Work and also stated that Environment Compensation of Rs.2,00,65,165.00 permitted the recovery of this amount from bidder.
- Hon'ble High Court of Karnataka, Banglore WP No.328/2020 disposed off and permitted the Corporation Bank "to proceed ahead with the process of recovery" of Rs.275.00Cr.
- The Hon'ble High Court directed to adhere to their undertaking by paying Rs.12,97,04,000.00 only to the contractor within period stipulated by Department.

As per the Order of National Green Tribunal, the PWD Karnataka is liable pay compensation of Rs.2,00,65,165.00 to the Karnataka State Coastal Zone Management Authority which is directed to be recovered from the contractor. Therefore the deducting the compensation amount the total pending bill is Rs. 10,96,38,835/- which will be

paid to the M/s Yojak India Pvt.Ltd, Mangalore within an outer limit of three months.

ಎಂಬಂತೆ ಮಾನ್ಯ ಉಚ್ಛನ್ಯಾಯಾಲಯವು ಆದೇಶ ಮಾಡಿರುವುದರಿಂದ ದಂಡದ ಮೊತ್ತವು ಗುತ್ತಿಗೆದಾರರು ಕರಾರು ಉಲ್ಲಂಘಿಸಿ ಕಾಮಗಾರಿ ನಿರ್ವಹಿಸಿದ್ದರಿಂದ ಗುತ್ತಿಗೆದಾರರೇ ಪಾವತಿಸುವಂತೆ ಮಾನ್ಯ ಉಚ್ಛನ್ಯಾಯಾಲಯ ಅಂತಿಮ ತೀರ್ಪಿನಲ್ಲಿ ಆದೇಶಿಸಿರುತ್ತದೆ.

9) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ಭಾರಿ ಸಮುದ್ರ ಕೊರೆತ ಸಂಭವಿಸಿದಂತಹ ತುರ್ತು ಸಂಧರ್ಬಗಳಲ್ಲಿ ಸಾರ್ವಜನಿಕರ ಅಗ್ರಹದಂತೆ, ಜಿಲ್ಲಾಡಳಿತ ಸೂಚನೆಯಂತೆ ಸಾರ್ವಜನಿಕ ಆಸ್ತಿ-ಪಾಸ್ತಿ, ಸಂಪರ್ಕ ರಸ್ತೆಗಳು ಹಾನಿಯಾಗುವುದನ್ನು ತಡೆಯಲು ಅವಶ್ಯಕತೆಯ ಮೇರೆಗೆ ತುರ್ತು ನೆಲೆಯಲ್ಲಿ ತಾತ್ಕಾಲಿಕ ಕ್ರಮಗಳನ್ನು ಮಾತ್ರ ಕೈಗೊಳ್ಳಲಾಗುತ್ತದೆ.

10) ದೂರುದಾರರು ಆಪಾದಿಸಿರುವ 8 ಕಾಮಗಾರಿಗಳು ಸರ್ಕಾರದಿಂದ ದಿ: 28/09/2020 ರಲ್ಲಿ ಅನುಮೋದಿತ ಕಾಮಗಾರಿಗಳಾಗಿದ್ದು, ಅಂದಾಜು ಪಟ್ಟಿಗೆ ದಿ:08/02/2021 ರಂದು ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಮೂಲಕ ದಿ:29/05/2021 ರಂದು ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿ ಕರಾರು ನೊಂದಾಯಿಸಲಾಗಿರುತ್ತದೆ. ದಿ: 29/05/2021 ರಂದು ಕಾಮಗಾರಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ಭೌತಿಕವಾಗಿ ತಾಂತ್ರಿಕ ವಿನ್ಯಾಸದಂತೆ ನಿರ್ವಹಿಸಿ ಮುಕ್ತಾಯಗೊಂಡಿರುತ್ತದೆ.

11) ಕಾಮಗಾರಿಯ ಯೋಜನೆಗೆ ಅವಶ್ಯವಿರುವ 70.30 ಎಕರೆ ಜಮೀನಿನಲ್ಲಿ 58.10 ಎಕರೆ ಜಮೀನು ಈಗಾಗಲೇ ಮೀನುಗಾರಿಕೆ ಇಲಾಖೆ ವಶಕ್ಕೆ ನೀಡಲು

ಆದೇಶವಾಗಿರುತ್ತದೆ. ಉಳಿದ 12.20 ಎಕರೆ ಜಮೀನು ಭೂ ಸ್ವಾಧೀನತೆ ಪಡೆಯುವ ಪ್ರಕ್ರಿಯೆಯಲ್ಲಿ ಪ್ರಗತಿಯಲ್ಲಿದ್ದು, ಜಿಲ್ಲಾಧಿಕಾರಿಯವರಿಂದ ಅಧಿಸೂಚನೆ ಯಾಗಿರುತ್ತದೆ. ಭೂ ಸ್ವಾಧೀನತೆ ಅವಶ್ಯವಿರುವ ರೂ. 13.24 ಕೋಟಿ ಮೊತ್ತದಲ್ಲಿ ಶೇ.10 ರಷ್ಟು ಅಂದರೆ 1.32 ಕೋಟಿ ಮೊತ್ತವನ್ನು ಭೂ ಸ್ವಾಧೀನಕ್ಕೆ ಸಹಾಯಕ ಕಮಿಷನರ್ ಕುಂದಾಪುರ ಇವರಿಗೆ ಪಾವತಿಸಲಾಗಿದೆ. ಅರ್ಹ ಮೊತ್ತವನ್ನು ಪಾವತಿಸಲು ಮಂಜೂರಾದ ಅಂದಾಜು ಪಟ್ಟಿಯಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ತಾಂತ್ರಿಕ ಬಿಡ್ ತಿರಸ್ಕೃತವಾಗಿರುವ ಗುತ್ತಿಗೆದಾರರು ಉಚ್ಚನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ ನಂ.4179/2021 ರಂತೆ ದಾವೆ ಹೂಡಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗಿರುವುದಿಲ್ಲ ಎಂಬಂತೆ ನಮೂದಿಸಿ ಸಲ್ಲಿಸಿರುತ್ತಾರೆ.

12) ಈ ಮೇಲ್ಕಾಣಿಸಿದ ಎಲ್ಲಾ ಅಂಶಗಳಿಂದ ಎದುರುದಾರರು ಕಾಮಗಾರಿಯನ್ನು ಗುತ್ತಿಗೆದಾರರಿಗೆ ಕರಾರಿನೊಂದಿಗೆ ನೀಡಿದ ನಂತರ ಗುತ್ತಿಗೆದಾರರು ಕಾಮಗಾರಿಯನ್ನು ನಿಯಮಾವಳಿಯಂತೆ ಕೈಗೊಳ್ಳದೇ ಬೇಜವಾಬ್ದಾರಿಯಿಂದ ಹೂಳೆತ್ತಿದ ಮರಳನ್ನು ನದಿದಂಡೆಯಲ್ಲಿ ಡಂಪ್ ಮಾಡಿರುವುದರಿಂದ ಎನ್.ಜಿ.ಟಿ ನ್ಯಾಯಪೀಠ ಸಿ.ಆರ್.ಝಡ್ ನಿಯಮ ಉಲ್ಲಂಘನೆಗೆ ದಂಡ ವಿಧಿಸಿರುವುದರಿಂದ ಎದುರುದಾರರು ಕಾಮಗಾರಿಯ ಸಮಯದಲ್ಲಿ ಪರಿಶೀಲನೆ ಮಾಡದೇ ಸೂಕ್ತ ನಿರ್ದೇಶನ ನೀಡದೇ ನಿರ್ಲಕ್ಷ್ಯ ತೋರಿರುವುದು ಇದರಿಂದ ಪರಿಸರಕ್ಕೆ ಧಕ್ಕೆಯಾಗಲು ಕಾರಣ ವಾಗಿರುವುದು ಮಾನ್ಯ ಉಚ್ಚನ್ಯಾಯಾಲಯದ ಆದೇಶದಿಂದ ಸ್ಪಷ್ಟವಾಗುತ್ತದೆ. ಗುತ್ತಿಗೆದಾರರಿಗೆ ದಂಡದ ಮೊತ್ತವನ್ನು ಪಾವತಿಸುವಂತೆ ನಿರ್ದೇಶನ ನೀಡಿದರೂ ಸಹಾ ಕಾಮಗಾರಿಯ ಸಮಯದಲ್ಲಿ ಎದುರುದಾರರು

ಗುತ್ತಿಗೆದಾರರು ನಿರ್ವಹಿಸುತ್ತಿರುವ ಕಾಮಗಾರಿಯನ್ನು ಪರಿಶೀಲಿಸದೆ ನಿರ್ಲಕ್ಷಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

13) **ಎದುರುದಾರರು ದಿ:13/01/2022 ರಂದು ಮುಂದುವರೆದ ಆಕ್ಷೇಪಣೆಯನ್ನು ಸಲ್ಲಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ಉಡುಪಿ ತಾಲ್ಲೂಕು ಕೋಡಿಕನ್ಯಾನ ಜಟ್ಟಿ ಮುಂಭಾಗದಲ್ಲಿ ಹಾಗೂ ಚಾನೆಲ್‌ನಲ್ಲಿ ಹೂಳೆತ್ತುವ ಕಾಮಗಾರಿ ಅಂದಾಜು 647.00 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ 60:40 ಅನುಪಾತದಲ್ಲಿ ದಿ:08/12/2015 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಅದರನ್ವಯ ದಿ:23/04/2016 ರಂದು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ ಧಾರವಾಡ ಇವರಿಂದ ತಾಂತ್ರಿಕ ಮಂಜೂರಾತಿ ಪಡೆಯಲಾಗಿರುತ್ತದೆ. ಟೆಂಡರ್ ಆಧಾರದ ಮೇರೆಗೆ ಕಾಮಗಾರಿಯನ್ನು ಮೆ:ಯೋಜಕ ಇಂಡಿಯಾ ಪ್ರೈ.ಲಿ., ಮಂಗಳೂರು ರವರಿಗೆ ದಿ:06/02/2017 ರಂದು ಗುತ್ತಿಗೆ ಕರಾರನ್ನು ಮಾಡಿಕೊಂಡು ಕಾಮಗಾರಿ ನಿರ್ವಹಿಸಲು ಕಾಮಗಾರಿ ಸ್ಥಳವನ್ನು ದಿ:14/02/2017 ರಂದು ಹಸ್ತಾಂತರಿಸಲಾಗಿದೆ.

14) ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿ ಹೂಳೆತ್ತಿದ ಮರಳನ್ನು ಆಳ ಸಮುದ್ರದಲ್ಲಿ ಡಂಪ್ ಮಾಡದೇ ನದಿಪಾತ್ರದಲ್ಲಿ ಮರಳನ್ನು ಡಂಪ್ ಮಾಡಿರುತ್ತಾರೆ. ಗುತ್ತಿಗೆ ಕರಾರಿನಲ್ಲಿ ನಮೂದು ಮಾಡಿರುವ ಪ್ರಕಾರ ಮರಳನ್ನು ಆಳ ಸಮುದ್ರದಲ್ಲಿ ಡಂಪ್ ಮಾಡಬೇಕಾಗಿದ್ದು, ಈ ಕುರಿತು ಕರಾರನ್ನು ಉಲ್ಲಂಘಿಸಿದ್ದರಿಂದ ಸೂಚನಾಪತ್ರಗಳನ್ನು ಗುತ್ತಿಗೆದಾರರಿಗೆ ನೀಡಲಾಗಿರುತ್ತದೆ.

15) ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯು ಮುಗಿದಿದ್ದರೂ ಸಹಾ ಕಾಮಗಾರಿಯನ್ನು ಪೂರ್ಣಗೊಳಿಸುವ ಲಕ್ಷಣಗಳು ಕಂಡುಬಾರದ ಕಾರಣ ವಿಭಾಗ ಮತ್ತು ಉಪವಿಭಾಗ ಕಛೇರಿಯಿಂದ ಹಲವಾರು ನೋಟಿಸನ್ನು ನೀಡಿದರೂ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸದೇ ಸ್ಥಗಿತಗೊಳಿಸಿರುತ್ತಾರೆ.

16) ಮೆ:ಯೋಜಕ ಇಂಡಿಯಾ ಪ್ರೈ.ಲಿ., ಮಂಗಳೂರು ಇವರು ಟೆಂಡರ್ ನಿಯಮಾವಳಿಯಂತೆ ಕಾರ್ಯನಿರ್ವಹಿಸದೇ ಹೂಳೆತ್ತಿದ ಮರಳನ್ನು ನದಿಪಾತ್ರದಲ್ಲಿ ಡಂಪ್ ಮಾಡಿದ್ದು, ಡಂಪ್ ಮಾಡಿದ ಮರಳನ್ನು ಕೂಡಲೇ ವಿಲೇವಾರಿ ಮಾಡುವಂತೆ ಸೂಚನಾಪತ್ರ ನೀಡಿದರೂ ಕ್ರಮ ವಹಿಸದೇ ಹೋಗಿರುತ್ತಾರೆ. ಗುತ್ತಿಗೆದಾರರು ಕಾಮಗಾರಿಯ ಕರಾರು ನಿಬಂಧನೆಗಳನ್ನು ಉಲ್ಲಂಘಿಸಿದ್ದರಿಂದ ನದಿಪಾತ್ರದಲ್ಲಿ ಖಾಲಿ ಇರುವ ಜಾಗದಲ್ಲಿ ಡಂಪ್ ಮಾಡಿರುವ ಮರಳಿನಿಂದ ಸದರಿ ಪ್ರದೇಶದ ಸ್ಥಳೀಯರು ರಾಷ್ಟ್ರೀಯ ಹಸಿರು ನ್ಯಾಯಪೀಠ ದಕ್ಷಿಣವಲಯ, ಚೆನ್ನೈ ರಲ್ಲಿಗೆ ಓ.ಎ.ನಂ.71/2017 ರಂತೆ ಪ್ರಕರಣ ದಾಖಲಿಸಿದ್ದು, ರಾಷ್ಟ್ರೀಯ ಹಸಿರು ನ್ಯಾಯಪೀಠ ವಿಚಾರಣೆ ನಡೆಸಿರುತ್ತದೆ.

17) ಸಿ.ಆರ್.ಝಡ್ ನಿರಾಕ್ಷೇಪಣೆ ಪಡೆಯಲು ಪರಿಸರ ಇಲಾಖೆಗೆ ದಿ: 09/01/2018 ಮತ್ತು 02/04/2019 ರಂದು ಅರ್ಜಿ ಸಲ್ಲಿಸಲಾಗಿರುತ್ತದೆ. ಹಸಿರು ನ್ಯಾಯಪೀಠದಲ್ಲಿ ದೂರು ದಾಖಲಾಗಿದ್ದರಿಂದ ನಿರಕ್ಷೇಪಣಾ ದೊರಕಿರುವುದಿಲ್ಲ. ಹಸಿರು ನ್ಯಾಯಪೀಠವು ಪರಿಸರಕ್ಕೆ ಆದ ಹಾನಿ ಸರಿಪಡಿಸಲು ಹಾಗೂ ಡ್ರೆಜ್ಜಿಂಗ್ ಮಾಡಿ ನದಿ ದಂಡೆಯಲ್ಲಿ ಸಂಗ್ರಹಿಸಿರುವ ಹೂಳನ್ನು ಮತ್ತು ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಿಸಿರುವ ಬಂಡ್ ರಿವೇಟ್ಮೆಂಟ್ ತೆಗೆದು ಪರಿಸರವನ್ನು ಪೂರ್ವ ಸ್ಥಿತಿಗೆ ತರಲು ರೂ.

2,00,65,165/- ಮೊತ್ತದ ದಂಡವನ್ನು ವಿಧಿಸಿರುತ್ತದೆ. ಕಾಮಗಾರಿಯ ಗುತ್ತಿಗೆದಾರರಾದ ಮೆ:ಯೋಜಕ ಇಂಡಿಯಾ ಪ್ರೈ.ಲಿ., ಮಂಗಳೂರು ಇವರು ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರಾರಿನ ನಿಯಮಾವಳಿಯಂತೆ ಕೈಗೊಳ್ಳದೇ ಹೋಗಿದ್ದರಿಂದ ದಂಢವಿಧಿಸಿದ್ದು, ಸದರಿ ದಂಡವನ್ನು ನಿಯಮಾನುಸಾರ ಗುತ್ತಿಗೆದಾರರಿಂದ/ಇಲಾಖೆಯಿಂದ (ಸಣ್ಣ ನೀರಾವರಿ ಇಲಾಖೆ ಸೇರಿ) ಪಾವತಿಸಲು ಆದೇಶಿಸಲಾಗಿರುತ್ತದೆ.

18) ಗುತ್ತಿಗೆದಾರರಿಗೆ ಈ ಸಂಬಂಧ ಅನೇಕ ಸೂಚನಾಪತ್ರ ನೀಡಿದರೂ ಸಹಾ ಕ್ರಮ ಕೈಗೊಳ್ಳದೇ ಹೋಗಿದ್ದರಿಂದ ಮಾನ್ಯ ಉಚ್ಛನ್ಯಾಯಾಲಯ ಬೆಂಗಳೂರು ದ ರಿಟ್ ಅರ್ಜಿ ಸಂಖ್ಯೆ: 328/2020 ರ ಅನ್ವಯ ಈಗಾಗಲೇ ಆದೇಶ ಹೊರಡಿಸಿದ್ದು ಇರುತ್ತದೆ. ಮಾನ್ಯ ಹಸಿರು ನ್ಯಾಯ ಪೀಠ, ದಕ್ಷಿಣ ವಲಯ, ಚೆನ್ನೈ ನ್ಯಾಯಾಲಯವು ಈ ಕೆಳಗಿನ ಅಂಶಗಳನ್ನು ಪರಿಗಣಿಸಿರುತ್ತದೆ.

**Committee Observations**

1.Executive Engineer, ports and Fisheries has called for the tenders and given the work order of dredging for a 3.12 KM distance with a width of 30 meter and -2.5 meter depth to the successful bidder M/s.Yojaka India Pvt.Ltd., Manglore on 14.02.2017 on March 2017 and started the dredging from 14.04.2017.

2. Subsequently, AEE, Dept.of Minor Irrigation. Udupi sub division have constructed protection bund and road in

the same area to prevent the dredged materials being washed away by the tidal effects, thus, the authorities have filled up a part of the river reclaiming 5.9 acres of land. They have carried out the entire work in the name of protecting the river from flooding and soil erosion, but, in reality they have made the area more prone to flooding by blocking and changing the course of the river.

3. As can be seen from the two pictures, the authorities have clearly filled up the ecologically sensitive area of the river violating the CRZ Notification, 2011. Hence, KSCZMA has issued notice asking why criminal case shall not be filled as per provisions of section 19 of the Environment (Protection) Act, 1986 to AEE, Ports and Fisheries Division, Udupi and AEE, Minor Irrigation, Udupi and Sr.Asst.Director, Fisheries, Udupi seeking explanation from the concerned officers.

4. EE, Ports and Fisheries started acting on the notice on latter dates and stopped this part of dredging work from 21.02.2018 and applied for CRZ clearance. However, started the dredging work again on 14.02.2019 from the side of Hangarkatte

river mouth towards upstream again violating the CRZ Notification 2011. Subsequently, this work was also stopped from 26.03.2019.

5. AEE, Minor Irrigation has submitted his reply to the notice of the KSCZMA issued under the provisions of the Environment (Protection) Act, 1986 saying that they have constructed the bunds and roads in the location in question to protect the soil erosion and not done any harm to the environment and that there were no mangroves in the location and done the work in the interest of public.

6. However, as seen from the Google images furnished by the Divisional Forest Officer, Kundapura, there were Mangroves which were grown naturally due to tidal effect and the same is destroyed by the said activity.

7. Regional Director(Environment) also makes it very clear that authorities have filled up of the river (ecologically sensitive Zone) itself and reclaimed about 5.9 acres of land, thereby disturbing the river course and destroying and Mangroves and

breeding of other fish species in violation of CRZ Notification, 2011.

8. The Pictures produced from Regional Director(Environment) show clearly the location to the breeding ground for various fishing species (ecologically sensitive). The authorities of Minor Irrigation have cut many mangroves and thrown on the sides, on the neighboring land.

9. The dredging was carried out to create a navigation channel as navigation was not possible during law tide. And it was not for removal of silts/sediments to restore the original dredging. Accordingly, it required prior EC under the EIA Notification, 2006 and its amendment. Hence, there is lapse on the part of the Ports and Fisheries in this respect.

10. There is clear violation of CRZ Notification, 2011 by the authorities of EE, Ports and Fisheries Division, Udupi and AEE, Minor Irrigation, Udupi. Violation is for not only taking up the dredging work without prior CRZ clearance and EC, but, also filling up the area of river falling under ecologically sensitive zone, construction of bunds and roads in CRZ-1 A area of the

river and reclaiming 5.9 acres of land, thereby changing the river course and being responsible for making the area more prone to flooding.

**11. Conclusion of the Committee:**

Executive Engineer, Ports and fisheries Division has taken up the dredging work and expansion of the Kodikanyana Jetty without obtaining necessary clearance under the CRZ Notification, 2011 and EIA Notification, 2006 and its amendments from time to time. Karntaka State Coastal Zone management Authority in their meeting held on 14.02.2020 has considered the above issues has clear violation of provisions of CRZ Notification, 2011 and decided to file criminal case against the violators (Executive Engineer, Ports and Fisheries Division and Ass. Execution Engineer, Minor Irrigation Udupi) has per sec.19 of environment (protection) Act. 1986.

**12. Thereafter, this Tribunal passed the following order:**

It is seen from the report of the committee that there are a lot of violation committed in respect of CRZ Notification, 2011 and also EIZ Notification, 2006 and also there is

destruction of Mangroves and reclamation of portion of the river in Coastal Regulation Zone without getting necessary permission from the Coastal Zone Management Authority to diversion of the course of the river.

13. It is also seen from the report that Coastal Zone Management Authority had already initiated proceedings against the violators and they have not submitted the final outcome of the same.

14. Further, the committee has not considered the question of damage caused to the environment and also they have not assessed the environmental compensation for the degradation caused including the remedial measures to restore to its original position. This exercise will have to be done by the committee and they cannot leave it to the Violators to assess the same.

15. So, the committee is directed to assess the environmental damage caused and assess the environmental compensation payable and also the remedial measures to be taken for restoring the damage caused to the environment as well. For this purpose, we grant two months time. In the mean

time, party respondents are at liberty to file their objections to the committee report.

19) ಈ ಮೇಲ್ಕಾಣಿಸಿದ ಅಂಶಗಳಿಂದ ಮಾನ್ಯ ಹಸಿರು ನ್ಯಾಯ ಪೀಠವು ಕರಾವಳಿ ಪ್ರದೇಶಕ್ಕೆ ಹಾನಿಯಾಗಿರುವುದನ್ನು ಗಮನಿಸಿ ಆದೇಶ ಮಾಡಿರುವುದು ಕಂಡುಬರುತ್ತದೆ.

20) **ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ರವರಿಂದ ದಿ:05/03/2022 ರಂದು ಪತ್ರ ಸ್ವೀಕರಿಸಿದ್ದು,** ತಮ್ಮ ಪತ್ರದಲ್ಲಿ 2017 ರಿಂದ 2019 ರವರೆಗೆ ಕಾರ್ಯನಿರ್ವಹಿಸಿದ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ರವರ ಮಾಹಿತಿಯೊಂದಿಗೆ ಪತ್ರ ಸಲ್ಲಿಸಿರುತ್ತಾರೆ. ಶ್ರೀ.ದಯಾನಂದ ಕೆ.ಆರ್. (2ನೇ ಎದುರುದಾರರು) ರವರು ದಿ:22/07/2016 ರಿಂದ 28/06/2018 ರ ವರೆಗೆ ಕರ್ತವ್ಯ ನಿರ್ವಹಿಸಿದ್ದು, ನಂತರ ಶ್ರೀ.ನಾಗರಾಜ ಎಸ್. ರವರು 28/06/2018 ರಿಂದ 06/07/2018 ರವರೆಗೆ ಕರ್ತವ್ಯ ನಿರ್ವಹಿಸಿ ನಿವೃತ್ತಿಯಾಗಿರುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಶ್ರೀ.ಉದಯಕುಮಾರ್ (3ನೇ ಎದುರುದಾರರು) ರವರು ದಿ:06/12/2018 ರಿಂದ ದಿ:01/03/2019 ರ ವರೆಗೆ ಕರ್ತವ್ಯ ನಿರ್ವಹಿಸಿದ್ದು, ಶ್ರೀ.ಟಿ.ಎಂ.ಮಂಜೇಗೌಡ (4ನೇ ಎದುರುದಾರರು) ರವರು ದಿ:01/03/2019 ರಿಂದ ದಿ:30/04/2021 ರ ವರೆಗೆ ಕೆಲಸ ನಿರ್ವಹಿಸಿರುವುದಾಗಿ ನಮೂದಿಸಿ ಪತ್ರ ಸಲ್ಲಿಸಿರುತ್ತಾರೆ.

21) **ದಿ:23/05/2022 ರಂದು 3ನೇ ಎದುರುದಾರರಿಂದ ಆಕ್ಷೇಪಣೆ ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ತಾನು ದಿ:06/12/2018 ರಿಂದ 23/12/2018

ರವರೆಗೆ ಹಾಗೂ ದಿ:28/02/2019 ರಿಂದ ದಿ:01/03/2019 ರವರೆಗೆ ಒಟ್ಟು 23 ದಿನಗಳು ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸಿರುತ್ತೇನೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಳ್ಳುವ ಬಂದರು ಮತ್ತು ಮೀನುಗಾರಿಕಾ ವಿಭಾಗಕ್ಕೆ ಸಂಬಂಧಿಸಿದಂತೆ ಕಾಮಗಾರಿಯನ್ನು ಪ್ರಾರಂಭಿಸುವ ಪೂರ್ವದಲ್ಲಿ ನಿಯಮಾನುಸಾರು ಸಕ್ಷಮ ಪ್ರಾಧಿಕಾರದಿಂದ ಸಿ.ಆರ್.ಝುಡ್ ನಿರಾಕ್ಷೇಪಣಾ ಪತ್ರವನ್ನು ಪಡೆದು ಕಾಮಗಾರಿಯನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಕಾಮಗಾರಿಗೆ ದಿ:30/11/2019 ರಂದು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಸಮಿತಿಯ ಮೂಲಕ ನಿರಾಕ್ಷೇಪಣಾ ಪತ್ರ ಪಡೆದು ನಿಯಮಾನುಸಾರ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಕಾಮಗಾರಿ ಸಂಖ್ಯೆ:2, 3 ಮತ್ತು 4 ಕ್ಕೆ ಸಿ.ಆರ್.ಝುಡ್ ನಿಂದ ನಿರಕ್ಷೇಪಣಾ ಪತ್ರ ಪಡೆಯಲಾಗಿದ್ದು, ಕಾಮಗಾರಿ ಅಡಿಯಲ್ಲಿ 6 ವಿವಿಧ ಕಾಮಗಾರಿಗಳನ್ನು ಸೇರಿಸಿ ಒಂದು ಪ್ಯಾಕೇಜ್ ಮಾಡಿ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಯನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಕಾಮಗಾರಿಗೆ ಸಿ.ಆರ್.ಝುಡ್ ಕ್ಲಿಯರೆನ್ಸ್ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈಗಾಗಲೇ ಎನ್.ಐ.ಟಿ.ಕೆ ಸೂರತ್ಕಲ್ ಇವರು ಸ್ಥಳ ಪರೀಕ್ಷಿಸಿದ್ದು, ರ್‍ಯಾಪಿಡ್ ಇ.ಐ.ಎ ವರದಿ ನೀಡಬೇಕಾಗಿರುತ್ತದೆ.

22) ಸಮುದ್ರ ಕೊರೆತ ತಡೆಗಟ್ಟುವ ಸಂಬಂಧ 7 ವಿವಿಧ ಸರಪಳಿಗಳಲ್ಲಿನ ಕಾಮಗಾರಿಗಳನ್ನು ಸೇರಿಸಿ ಒಂದು ಪ್ಯಾಕೇಜ್ ಮಾಡಿ ಟೆಂಡರ್ ಕರೆದು ಕಾಮಗಾರಿಯನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ ದಕ್ಷಿಣ ಕನ್ನಡ ಜಿಲ್ಲೆಯ ಮೇಲಿನ ಪ್ರದೇಶಗಳಲ್ಲಿ ಸಂಭಾವ್ಯ ಸಮುದ್ರ ಕೊರೆತ ಧ್ವತೀಯ ತೀರಗಳನ್ನು ಆಯ್ಕೆಮಾಡಿ ಸೂಕ್ತ ಸಮುದ್ರ ಕೊರೆತ ಸಂರಕ್ಷಣಾ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ಸಿ.ಡಬ್ಲ್ಯೂ.ಪಿ.ಆರ್.ಎಸ್, ಪೂಣೆ ಮತ್ತು ಕೆ.ಇ.ಆರ್.ಎಸ್ ಸಂಸ್ಥೆ, ಕೃಷ್ಣರಾಜಸಾಗರ ಇವರ ಮೂಲಕ ತಾಂತ್ರಿಕ

ವಿನ್ಯಾಸವನ್ನು ಪಡೆದು ಸದರಿ ಪ್ರದೇಶದಲ್ಲಿ ಸಂರಕ್ಷಣಾ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಸಮುದ್ರ ಕೊರೆತ ನಿಯಂತ್ರಣಾ ಚಟುವಟಿಕೆಯು ಕರಾವಳಿ ನಿಯಂತ್ರಣಾ ವಲಯ ಅಧಿಸೂಚನೆ 2011 ರಪ್ರಕಾರ ಅನುಮತಿಸಿದ ಚಟುವಟಿಕೆಯಾಗಿದ್ದು, ಆಯ್ದ ಸಮುದ್ರ ಕೊರೆತ ಸಂಭಾವ್ಯ ಪ್ರದೇಶಗಳಲ್ಲಿ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ಕರಾವಳಿ ನಿಯಂತ್ರಣಾ ವಲಯ ನಿರಾಕ್ಷೇಪಣಾ ಪತ್ರ ಪಡೆಯಲು ಕಛೇರಿಯಿಂದ ದಿ:17/07/2021 ರಲ್ಲಿ ಅರ್ಜಿ ಸಲ್ಲಿಸಲಾಗಿದ್ದು, ದಿ:30/09/2021 ರಂದು ದಕ್ಷಿಣ ಕನ್ನಡ ಜಿಲ್ಲಾ ಕರಾವಳಿ ನಿಯಂತ್ರಣಾ ವಲಯ ನಿರ್ವಹಣಾ ಸಮಿತಿಯ ಮೂಲಕ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಸಮಿತಿಗೆ ಶಿಫಾರಸ್ಸು ಮಾಡಲಾಗಿರುತ್ತದೆ. ಸಿ.ಆರ್.ಝಡ್ ನಿರಾಕ್ಷೇಪಣಾ ಪತ್ರ ಪಡೆಯಲು ಪರಿಸರ ಇಲಾಖೆಗೆ ದಿ: 09/01/2018 ಮತ್ತು 02/04/2019 ರಂದು ಅರ್ಜಿ ಸಲ್ಲಿಸಲಾಗಿದ್ದು, ಆದರೆ ಎನ್.ಜಿ.ಟಿ ನ್ಯಾಯಪೀಠದಲ್ಲಿ ದೂರು ದಾಖಲಾಗಿದ್ದರಿಂದ ನಿರಾಕ್ಷೇಪಣಾ ಪತ್ರ ದೊರೆತಿರುವುದಿಲ್ಲ.

23) **2ನೇ ಎದುರುದಾರರಿಂದ ದಿ:05-07-2022 ರಂದು ಆಕ್ಷೇಪಣೆ ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಪುನರುಚ್ಚರಿಸಿ, ತಾನು ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಯಲ್ಲಿ ದಿ:22-07-2016 ರಿಂದ 28-06-2018 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ತನ್ನ ಅವಧಿಯಲ್ಲಿ ಕಾಮಗಾರಿಗಳ ಟೆಂಡರ್ ಪ್ರಕಟಿಸಿರುವುದಿಲ್ಲ. ಬಂದರು ಮತ್ತು ಮೀನುಗಾರಿಕೆ ಕಛೇರಿ, ಉಡುಪಿಯಲ್ಲಿ ತನ್ನ ಸೇವಾ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುವಾಗ ಕಾಮಗಾರಿಯು ನಂತರ ಅನುಮೋದನೆಗೊಂಡ ಕಾಮಗಾರಿ ಯಾಗಿರುತ್ತದೆ. ಆದ್ದರಿಂದ ತನ್ನ ಅವಧಿಯಲ್ಲಿ ಯಾವುದೇ ಕಾಮಗಾರಿ ನಿರ್ವಹಿಸಿರುವುದಿಲ್ಲ ಎಂದು ಆಕ್ಷೇಪಣೆಯಲ್ಲಿ ನಮೂದಿಸಿ ಸಲ್ಲಿಸಿರುತ್ತಾರೆ.

24) **4ನೇ ಎದುರುದಾರರಿಂದ ದಿ:09/11/2022 ರ ಆಕ್ಷೇಪಣೆ ಸ್ವೀಕರಿಸಿದ್ದು, 1ನೇ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಪುನರುಚ್ಚರಿಸಿ,** ತಾನು ದಿ:30-04-2021 ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತೇನೆ. ದೂರಿನಲ್ಲಿ ತಿಳಿಸಿರುವ ಹಲವಾರು ಆರೋಪಗಳ ಬಗ್ಗೆ ಒಟ್ಟು 6 ಕಾಮಗಾರಿಗಳ ಪೈಕಿ 4 ಕಾಮಗಾರಿಗಳಿಗೆ ನಿಯಮಾನುಸಾರ ಅನುಮತಿ/ಅನುಮೋದನೆಗಳನ್ನುಪಡೆದುಕೊಂಡು ಕಾರ್ಯನಿರ್ವಹಿಸಿದ್ದು ಇರುತ್ತದೆ. ಉಳಿದ ಕಾಮಗಾರಿಗಳು ತುರ್ತು ಕಾಮಗಾರಿಗಳಾಗಿದ್ದು, ಅವುಗಳಿಗೆ ಸಿ.ಆರ್.ಜೆಡ್ ನಿಂದ ಅನುಮತಿ ಪಡೆದ ಬಗ್ಗೆ ನೆನಪಿನಲ್ಲಿರುವುದಿಲ್ಲ. ತಾನು ಕಾರ್ಯನಿರ್ವಹಿಸಿದ ಕಛೇರಿಗೆ ತೆರಳಿ ಖಚಿತವಾಗಿ ಉತ್ತರಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಕಾರ್ಯಪಾಲಕ ಇಂಜಿನೀಯರ್, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ರವರಿಂದ ದಾಖಲೆಗಳನ್ನು ಪಡೆದುಕೊಳ್ಳಬಹುದೆಂದು ನಮೂದಿಸಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

25) ದೂರು, ಆಕ್ಷೇಪಣೆ ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, 2 ಮತ್ತು 4ನೇ ಎದುರುದಾರರು ತಮ್ಮ ಸೇವಾ ಅವಧಿಯಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಸಿಆರ್‌ಜೆಡ್‌ನ ಅನುಮತಿಯನ್ನು ಪಡೆಯದೆ ಕಾಮಗಾರಿಗಳನ್ನು ಮಾಡಲು ಅನುಮತಿ ನೀಡಿದ್ದರಿಂದ, ಸ್ಥಳೀಯರು ಎನ್‌ಜಿಟಿ ನ್ಯಾಯಾದಿಕರಣಕ್ಕೆ ಅರ್ಜಿ ಸಲ್ಲಿಸಿದ್ದರಿಂದ, 2 ಕೋಟಿ ಮೊತ್ತದ ದಂಡವನ್ನು ನ್ಯಾಯಾಲಯ ವಿಧಿಸಿದ್ದು, ಸದರಿ ಹಣವನ್ನು ಇಲಾಖೆಯಿಂದ ಭರಣ ಮಾಡಬೇಕೆಂದು ಆದೇಶದಲ್ಲಿ ತಿಳಿಸಿರುವುದರಿಂದ, ಎದುರುದಾರರು ಕಾಮಗಾರಿ ಪೂರ್ವ ಅನುಮತಿ ಪಡೆಯದೆ ಕರ್ತವ್ಯ ನಿರ್ವಹಿಸಿರುವುದರಿಂದ ಸರ್ಕಾರಕ್ಕೆ ಸದರಿ 2 ಕೋಟಿ

ರೂ.ಗಳ ದಂಡದ ಮೊತ್ತ ಪಾವತಿಸಲು ಕಾರಣರಾಗಿರುವುದರಿಂದ, 2 ಮತ್ತು 4ನೇ ಎದುರುದಾರರು ತಮ್ಮ ಕರ್ತವ್ಯದಲ್ಲಿ ಲೋಪ ಎಸಗಿರುವುದು ಹಾಗೂ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ದೃಢಪಡುತ್ತದೆ.

26) 2 ಮತ್ತು 4ನೇ ಎದುರುದಾರರ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ. 2 ಮತ್ತು 4ನೇ ಎದುರುದಾರರ ವಿರುದ್ಧ ತಮ್ಮ ಕರ್ತವ್ಯದಲ್ಲಿ ಲೋಪ ಮತ್ತು ನಿರ್ಲಕ್ಷ ಎಸಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವುದರಿಂದ ಸದರಿ ಸರ್ಕಾರಕ್ಕೆ ಉಂಟಾದ ನಷ್ಟವನ್ನು ಎದುರುದಾರರಿಂದ ಕಾನೂನನ್ವಯ ಮರುಭರಣ ಮಾಡಿಕೊಳ್ಳಲು ಕ್ರಮವನ್ನು ಜರುಗಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1) ರಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

27) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

24/01/23

**[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**